# ಮಾದರಿ I

## ಕನ್ನಡ ಪ್ರಥಮ ಭಾಷೆ ಕನ್ನಡ 1 ಪೇಪರ್

### ವಿವಿಧ ರೀತಿಯ ಪ್ರಶ್ನೆಗಳಿಗೆ ಉದಾಹರಣೆಗಳು

I. ಕೆಳಗಿನ ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅದರಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ. 15*1=15

1. 'ಟ' ವರ್ಗದ ಕೊನೆಯಲ್ಲಿರುವ ಅನುನಾಸಿಕಾಕ್ಷರ ____________
   ಎ. ನ ಬಿ. ಣ ಸಿ. ಮ ಡಿ. ಙ

2. 'ಮೈದೊಳೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ ____________
   ಎ. ಆದೇಶ ಸಂಧಿ ಬಿ. ಗುಣಸಂಧಿ ಸಿ. ಲೋಪಸಂಧಿ ಡಿ. ಸವರ್ಣ ದೀರ್ಘಸಂಧಿ

3. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅ ವಾಕ್ಯವು____________
   ಎ. ಸಾಮಾನ್ಯ ವಾಕ್ಯ ಬಿ. ಸಂಯೋಜಿತ ವಾಕ್ಯ ಸಿ. ಮಿಶ್ರ ವಾಕ್ಯ ಡಿ. ಅಲಂಕಾರಿಕ ವಾಕ್ಯ

4. 'ಬರೆದಾನು' ಪದವು ಕ್ರಿಯಾಪದದ ಈ ರೂಪದಲ್ಲಿದೆ.____________
   ಎ. ವಿದ್ಯರ್ಥಕ ರೂಪ ಬಿ. ನಿಷೇದಾರ್ಥಕ ಸಿ. ಸಂಭಾವನಾರ್ಥಕ ಡಿ. ಕ್ರಿಯಾರ್ಥಕ

5. 'ಶಾಲೆಯಲ್ಲಿ ' ಈ ಪದದಲ್ಲಿರುವ ವಿಭಕ್ತಿ ____________
   ಎ. ಪ್ರಥಮ ಬಿ. ತೃತೀಯ ಸಿ. ಸಪ್ತಮಿ ಡಿ. ಷಷ್ಠಿ

6. ಅವುದೀ ಶೀತಲ ಸುಖ ಸ್ಪರ್ಶ ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ ____________
   ಎ. ಭಾವಸೂಚಕ ಬಿ. ಪ್ರಶ್ನಾರ್ಥಕ ಸಿ. ಅಲ್ಪವಿರಾಮ ಡಿ. ಪೂರ್ಣವಿರಾಮ

7. ಚೆಲುವಿಕೆ ಈ ಪದದಲ್ಲಿರುವ ತದ್ಧಿತ ಪ್ರತ್ಯಯ ____________
   ಎ. ಇಗೆ ಬಿ.ಇಕೆ ಸಿ. ಈಗ ಡಿ. ವಿಕೆ

8. 'ಕುಡಿ ಹುಬ್ಬು' ಪದವು ಈ ಸಮಾಸಕ್ಕೆ ಉದಾಹರಣೆ ____________
   ಎ. ತತ್ಪುರುಷ ಬಿ. ದ್ವಂದ್ವ ಸಿ. ದ್ವಿಗು ಡಿ. ಅಂಶಿ

9. 'ಮಹೋಪಕಾರ' ಪದವು ಈ ಸಂಧಿಗೆ ಉದಾಹರಣೆ ____________
   ಎ. ಸವರ್ಣದೀರ್ಘ ಸಂಧಿ ಬಿ. ಗುಣ ಸಿ. ಆದೇಶ ಡಿ. ಯಣ್

10. ಸಂಜ್ಞಾ ಪದದ ತದ್ಭವ ರೂಪವಿದು ____________
    ಎ. ಸೊನ್ನೆ ಬಿ. ಶೂನ್ಯ ಸಿ. ಸನ್ನೆ ಡಿ. ಸನ್ನಾ

11. ಕುರುಡ ಪದವು ಈ ನಾಮಪದಕ್ಕೆ ಉದಾಹರಣೆ ____________
    ಎ. ರೂಢನಾಮ ಬಿ. ಅನ್ವರ್ಥನಾಮ ಸಿ.ಅಂಕಿತನಾಮ ಡಿ. ಭಾವನಾಮ

12. ನಂಬಿದರ್ಗೆ ಈ ಪದದ ಹೊಸಗನ್ನಡ ರೂಪ ________________
ಎ. ನಂಬಿದವರಿಗೆ ಬಿ. ನಂಬದವರಿಗೆ ಸಿ. ನಂಬುವವರಿಗೆ ಡಿ. ನಂಬಿದಾಗ

13. ಲಾಕ್ಷಾಗೇಹ ಈ ಪದದ ಅರ್ಥ ____________
ಎ. ಲಕ್ಷಾಗೇಹ ಬಿ. ಅರಗಿನ ಮನೆ ಸಿ. ಅರಗಿನ ಅರಮನೆ ಡಿ. ಅರಸನ ಮನೆ

14. ಬ್ಯಾಸಕಿ ಪದದ ಗ್ರಾಂಥಿಕ ರೂಪವಿದು ____________
ಎ. ಬೇಸ್ಯಾರ ಬಿ. ಬ್ಯಾಸರ ಸಿ. ಬೇಸರ ಡಿ. ಬೇಸಿಗೆ

15. ಭುವನ ಪದವು ಈ ಗಣಕ್ಕೆ ಸೇರಿದೆ ___________
ಎ. ಮ–ಗಣ ಬಿ. ನ–ಗಣ ಸಿ. ಜ–ಗಣ ಡಿ. ತ–ಗಣ

II.16. 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿ ಹೊಂದುವ ಪದಗಳನ್ನು ಆರಿಸಿ ಹೊಂದಿಸಿ ಬರೆಯಿರಿ. 5*1=5

| ಅ | ಬ |
|---|---|
| ಎ. ದಿವಾನ | 1. ಜೋಡುನುಡಿ |
| ಬಿ. ಕ್ಲಕ್ ಕ್ಲಕ್ | 2. ನುಡಿಗಟ್ಟು |
| ಸಿ. ಮಾರಣ ಹೋಮ | 3. ಇಂಗ್ಲಿಷ್ |
| ಡಿ. ಹಣ್ಣು –ಹಂಪಲು | 4. ದ್ವಿರುಕ್ತಿ |
| ಇ ಹೇಳು ಹೇಳು | 5. ಪಡೆನುಡಿ |
| | 6. ಪರ್ಷಿಯನ್ |
| | 7. ಅನುಕರಣಾವ್ಯಯ |
| | 8. ಪೋರ್ಚುಗೀಸ್ |

III. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. 5*1=5

17. ಮಂತ್ರ ವಿದ್ಯೆಯನರಿತ ______________
18. ಗೌರಿ ಹೆಜ್ಜೆಹಾಕಿದ ನೆಲದಲ್ಲಿ ___________ ಬೆಳೆಯಿತು.
19. ವಿಧಾನಸೌಧ ಕಟ್ಟಡದ ವಿನ್ಯಾಸವನ್ನು ಅಂತಿಮವಾಗಿ ಗೊತ್ತುಮಾಡಿದವರು _________
20. ತುಂಗಸಾನು ವೊಳ್ ದೇವದಾರುಗಳ್ ___________ ಹಿಮಶೈಲವೋ
21. ನೀರೊಳಗಿರ್ದುಂ ಬೆಮರ್ತ ______________

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 10*1=10

22. ಬುದ್ಧನ ಯಾವ ಮಾತು ಅಂಗುಲೀಮಾಲನಿಗೆ ಹೊಸದಾಗಿ ಕಂಡಿತು ?
23. ಮಂಜಪ್ಪನವರ ಕಾಲದಲ್ಲಿ ವಿದ್ಯಾರ್ಥಿಗಳ ಗುರಿ ಏನಾಗಿದ್ದಿತು ?
24. ಪಶುಲೋಮನ ಪರಮ ಮಿತ್ರನಾರು?
25. ಮೌರ್ಯರ ತಾಯಿಯ ಹೆಸರೇನು?
26. ಮೊಲವು ಪುರಾಣ ಕೂಪದ ಬಳಿಗೆ ಏಕೆ ಹೋಯಿತು?
27. ವ್ಯಾಸ ವಾಲ್ಮೀಕಿ ಭಾರತದ ಯಾವ ಭಾಗದವರು?
28. ಯಾರ ಬಾಳು ಇದ್ದೂ ಸತ್ತಂತೆ ?
29. ಶಬರನಿಗೆ ವಿಚಿತ್ರವಾಗಿ ಕಂಡುದು ಯಾವುದು?
30. ಶಿವ ಅರ್ಜುನನ್ನು ಪರೀಕ್ಷಿಸಲು ಯಾವ ವೇಷದಲ್ಲಿ ಬಂದನು?
31. ದುರ್ಯೋಧನನು ಎಲ್ಲಿ ಅಡಗಿಕೊಂಡಿದ್ದನು?

V. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2x15=30

32. ಅಳು ನಗು ಎರಡೂ ಪರಸ್ಪರ ವಿರುದ್ಧವಾದುವು ಹೇಗೆ?
33. ಅಂಗುಲಿಮಾಲ ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ ಏನೆಂದು ಅರಿಕೆ ಮಾಡಿಕೊಂಡನು?
34. ಶಾಲಾ ನೋಟೀಸ್ ಬೋರ್ಡಿನಲ್ಲಿ ಬರೆಯಲಾಗಿದ್ದ ಸೂಚನೆಗಳಾವುವು?
35. ಬಿಡುವಿನ ಸಮಯದಲ್ಲಿ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು?
36. ವ್ಯಕ್ತಿತ್ವ ಮತ್ತು ನಡತೆಯನ್ನು ಸಿದ್ಧಿಸಿಕೊಳ್ಳುವ ಪರಿ ಎಂತು?
37. ಚಾಣಾಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು? ವಿವರಿಸಿರಿ.
38. ಪಶುಲೋಮನು ಇಂದ್ರಾದಿ ದೇವತೆಗಳಲ್ಲಿ ಏನೆಂದು ಬೇಡಿಕೊಂಡನು?
39. ವಯಿನಾದ ಹೆಂಡತಿ ಇದ್ದಾಗ ಆಗುವ ಅನುಕೂಲಗಳೇನು?
40. ಕವಿ ಭಾರತದ ಪ್ರಾದೇಶಿಕ ವಿಭಿನ್ನತೆಯನ್ನು ಹೇಗೆ ವರ್ಣಿಸಿದ್ದಾನೆ?
41. ರಕ್ತ ಮೀರಿದ ಸಂಬಂಧದ ಹಿನ್ನಲೆ ಯಾವುದು?
42. ಸತಿ, ಸ್ನೇಹ,ಬಯಕೆಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯಗಳೇನು?
43. ಬೇಡ ವೇಷಧಾರಿಯಾದ ಶಿವ ಅರ್ಜುನನ್ನು ಅಪಹಾಸ್ಯ ಮಾಡಿದುದೇಕೆ?
44. ದುರ್ಯೋಧನನ ಮೇಲೆ ಗದಾ ಪ್ರಹಾರ ಮಾಡುವಾಗ ಭೀಮ ಕೊಟ್ಟ ಕಾರಣಗಳನ್ನು ತಿಳಿಸಿರಿ?
45. ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳಾವುವು?
46. ಹಲ್ಲಣ, ಬೆಲ್ಲ, ಹುಟ್ಟು, ಇವುಗಳ ಪ್ರಾಮುಖ್ಯತೆಯನ್ನು ಗೋಪಾಲದಾಸರು ಹೇಗೆ ವ್ಯಕ್ತಪಡಿಸಿದ್ದಾರೆ?

VI. ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿರಿ 3x5=15

47. 'ದೇವರು ನಮ್ಮ ತಪ್ಪುಗಳನ್ನು ಕ್ಷಮಿಸಿಯಾನು'
48. 'ರಕ್ಷಣಾ ಪಡೆಗಳು ದೇಶದ ಏಕತೆ ಮತ್ತು ರಾಷ್ಟ್ರೀಯ ಭಾವೈಕ್ಯದ ಸಂಕೇತ'
49. 'ಈ ಸಭಾ ಗೃಹದಲ್ಲಿಯ ಅರ್ಧದಷ್ಟು ಜನರು ಕತ್ತೆಗಳಲ್ಲ'
50. 'ಮಾವು ಬೇವು ಫಲ ಬಲಾಬಲ'
51. 'ದೇಶ ಕಳಿವಹುದಾರ ದೆಸೆಯಿಂದ'

VII. ಈ ಕವಿಗಳ ಸ್ಥಳ,ಕಾಲ,ಕೃತಿಗಳನ್ನು ಕುರಿತು ಬರೆಯಿರಿ. 3x2=6

52. ಹೆಚ್ ಜೆ ಲಕ್ಕಪ್ಪ ಗೌಡ
53. ಪಂಪ

VIII. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಣೆ ಮಾಡಿ, ಛಂಧಸ್ಸಿನ ಹೆಸರನ್ನು ಬರೆಯಿರಿ 3x1=3

54. ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
55. 'ಅಳುವ ಕಂದನ ತುಟಿಯು ಹವಳದ ಕುಡಿಯಂಗ' ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿರಿ 3*1=3

IX. ಕೆಳಗಿನ ಗಾದೆಮಾತುಗಳನ್ನು ಯಾವುದಾದರೂ ಒಂದನ್ನು ಕುರಿತು ವಿಸ್ತರಿಸಿ ಬರೆಯಿರಿ 3*1=3

56. 1. ಊಟ ಬಲ್ಲವನಿಗೆ ರೋಗವಿಲ್ಲ: ಮಾತುಬಲ್ಲವನಿಗೆ ಜಗಳವಿಲ್ಲ
    2. ತಾಳಿದವನು ಬಾಳಿಯಾನು.
    3. ಕಟ್ಟುವುದು ಕಠಿಣ; ಕೆಡಿಸುವುದು ಸುಲಭ.

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 4x1=4

57. ಅಲರೊಳಡಗಿದ -----------
--------------------
--------------------
------------ ವಾಯುವಿನಂತೆ
ಅಥವಾ
ಪರರ ಕಣ್ಣ ಕನ್ನಡಕದಲ್ಲಿ -----------
------------------------
-----------------------
--------------- ದೀಪ್ತಿಯಲಿ ಬೆಳೆ

XI ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ. 4x1=4

58. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಗಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂನೋಡುತಂ
ಕೆಲವಂ ಸಜ್ಜನರ ಸಂಗದಿಂದರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರ ಶ್ರೀ ಚೆನ್ನಸೋಮೇಶ್ವರಾ

XII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ 8–10 ವಾಕ್ಯದಲ್ಲಿ ಉತ್ತರಿಸಿ. 4x2=8

59. ಎ.) ಲಿಪಿಯ ಉಗಮ ಹೇಗಾಯಿತು? ವಿವರಿಸಿರಿ.
ಬಿ.) ತಡವಾಗಿ ಬಂದ ದೀರ್ಘಕರ್ಣನನ್ನು ಸಿಂಹವು ಪ್ರಶ್ನಿಸಿದ ಸಂದರ್ಭವನ್ನು ವಿವರಿಸಿರಿ.
60. ಸಿ.) ತಿಪ್ಪೇನಹಳ್ಳಿಗೆ ಪರಂಗಿ ಟೋಪಿ ಸಾಹೇಬರು ಭೇಟಿ ನೀಡಿದ ಪ್ರಸಂಗವನ್ನು ವಿವರಿಸಿರಿ.

XIII. 61. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು 8–10 ವಾಕ್ಯದಲ್ಲಿ ಉತ್ತರಿಸಿ. 4*1=4

ಎ) ರಸಬಳ್ಳಿ ಪದ್ಯದಲ್ಲಿ ಹೆತ್ತ ತಾಯಿ ತನ್ನ ಮಗುವನ್ನು ಬಣ್ಣಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ?
ಬಿ) ಅಜಗಣ್ಣನ ಯೋಗದ ಬಗೆಗೆ ಮುಕ್ತಾಯಕ್ಕನ ಅಭಿಪ್ರಾಯವನ್ನು ಸಂಗ್ರಹಿಸಿ ಬರೆಯಿರಿ?

X. 62 ಬದಲಾಗುತ್ತಿರುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಪದ್ದತಿಯನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿ ನಿಮ್ಮ ತಂದೆಗೆ ಪತ್ರ ಬರೆಯಿರಿ 5*1=5

ಅಥವಾ

ನಿಮ್ಮ ಪ್ರದೇಶದ ಬರಗಾಲವನ್ನು ವಿವರಿಸಿ, ಬರಪರಿಹಾರ ಕೈಗೊಳ್ಳಲು ಜಿಲ್ಲಾಧಿಕಾರಿಗಳನ್ನು ವಿನಂತಿಸಿ ಒಂದು ಪತ್ರ ಬರೆಯಿರಿ.

XIV ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ 5x1=5

63. 1.) ಹೆಚ್1 ಎನ್1 ಖಾಯಿಲೆಗೆ ಸಂಬಂಧಿಸಿದಂತೆ ಸರಕಾರ ವಹಿಸಬೇಕಾದ ಪಾತ್ರ
2). ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ
3) ಜನಸಂಖ್ಯಾ ಹೆಚ್ಚಳಕ್ಕೆ ಕಾರಣಗಳು

# ಮಾದರಿ II
# ಪ್ರಥಮ ಭಾಷೆ ಕನ್ನಡ

I. ಈ ಕೆಳಗಿನ ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ನಿಗದಿಪಡಿಸಿದ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಸ್ಫುಟವಾಗಿ ಬರೆಯಿರಿ. 15*1=15

1). ಕನ್ನಡ ವರ್ಣಮಲೆಯಲ್ಲಿ 'ಐ' ಅಕ್ಷರವು ______________
ಎ). ಹೃಸ್ವಸ್ವರ ಬಿ). ದೀರ್ಘಸ್ವರ ಸಿ). ಅಲ್ಪಪ್ರಾಣ ಡಿ). ಮಹಾಪ್ರಾಣ

2). ಇವುಗಳಲ್ಲಿ ಉತ್ತಮ ಪುರುಷದ ಸರ್ವನಾಮ __________
ಎ). ಅವನು ಬಿ). ನೀನು ಸಿ). ತಾವು ಡಿ). ನಾನು

3). 'ಮೈದೊಳೆ' ಇಲ್ಲಿರುವ ಸಂಧಿ ________
ಎ) ಆಗಮ ಬಿ) ಆದೇಶ ಸಿ) ಗುಣ ಡಿ) ಲೋಪ

4). ಅವರು ಬೆಂಗಳೂರಿಗೆ ಹೋದರು. ಇಲ್ಲಿ ಗೆರೆ ಎಳೆದಿರುವ ಪದದ ವಿದ್ಯರ್ಥಕ ರೂಪ __________
ಎ) ಹೋದಾರು ಬಿ) ಹೋಗರು ಸಿ) ಹೋಗಿದ್ದರು ಡಿ) ಹೋಗಲಿ

5). ಹಳೆಗನ್ನಡದ ತೃತೀಯಾ ವಿಭಕ್ತಿ ಪ್ರತ್ಯಯ ___________
ಎ) ಇಂದೆ ಬಿ) ಒಳ್ ಸಿ) ಮ್ ಡಿ) ಅತ್ತಣಿಂ

6). ವೃದ್ಧಿ ಸಂಧಿಗೆ ಇದು ಉದಾಹರಣೆ _____________
ಎ) ಸುರೇಂದ್ರ ಬಿ) ಏಕೈಕ ಸಿ) ಕಾರ್ಯಾನುಭವ ಡಿ) ವಾಗ್ದೇವಿ

7). 'ಕಾಲಿಗೆ ಬುದ್ಧಿ ಹೇಳು' ಎಂಬುದು ___________
ಎ) ಜೋಡುನುಡಿ ಬಿ) ನಾಣ್ಣುಡಿ ಸಿ) ಪಡೆನುಡಿ ಡಿ) ನುಡಿಗಟ್ಟು

8). 'ಶೂನ್ಯ' ಪದದ ತದ್ಬವ ರೂಪ __________
ಎ) ಸಂಜ್ಞಾ ಬಿ) ಸಂಜೆ ಸಿ) ಸೊನ್ನೆ ಡಿ) ಶೂನು

9). ಅಬ್ಬಾ ಎಷ್ಟು ಸುಂದರವಾಗಿದೆ. – ಈ ವಾಕ್ಯದ ಕೊನೆಯಲ್ಲಿರುವ ಲೇಖನ ಚಿಹ್ನೆ _______________
ಎ) ಪ್ರಶ್ನಾರ್ಥಕ ಬಿ) ಪೂರ್ಣವಿರಾಮ ಸಿ) ಭಾವಸೂಚಕ ಡಿ) ಉದ್ಧರಣ

10). 'ಓಟ'– ಈ ಪದ ______________
ಎ)ಕೃದಂತಭಾವನಾಮ ಬಿ) ಕೃದಂತ ನಾಮ ಸಿ) ಅವ್ಯಯ ಡಿ) ಕೃದಂತಾವ್ಯಯ

11). 'ಅನುವರ' ಈ ಪದದ ಅರ್ಥ _________
ಎ) ಅನುರಾಗ ಬಿ) ಪ್ರಸಿದ್ಧ ಸಿ) ಯುದ್ಧ ಡಿ) ಸ್ವಯಂವರ

12). 'ಬೆಮರು' ಈ ಪದದ ಹೊಸಗನ್ನಡ ರೂಪ _________
ಎ) ಬೆವರು ಬಿ) ಬೆರಗಾಗು ಸಿ) ಬೇಸರಾಗು ಡಿ) ಬೆಂಡಾಗು

13). ಈ ವರ್ಷ ಹೆಚ್ಚು ಮಳೆ ಬೀಳುತ್ತದೆಯೆಂದು ರೈತರು ಸಂತಸಪಟ್ಟರು' ಇದು ___________
ಎ) ಸಾಮಾನ್ಯ ವಾಕ್ಯ ಬಿ) ಸಂಯೋಜಿತ ವಾಕ್ಯ ಸಿ) ಸಂಭಾವನಾರ್ಥಕ ವಾಕ್ಯ ಡಿ) ಮಿಶ್ರ ವಾಕ್ಯ

14). ಕರುಣೆ ಕಡೆಗೋಲಿಟ್ಟು ಮಥಿಸುತ್ತಿಹೆ ಏಕೆ? ಇಲ್ಲಿರುವ ಅಲಂಕಾರ ________
ಎ) ಉಪಮಾ ಬಿ) ದೃಷ್ಟಾಂತ ಸಿ) ರೂಪಕ ಡಿ) ಅರ್ಥಾಂತರನ್ಯಾಸ

15). 'ನಡುರಾತ್ರಿ' – ಇಲ್ಲಿರುವ ಸಮಾಸ __________
ಎ) ಅಂಶಿ ಬಿ) ತತ್ಪುರುಷ ಸಿ) ದ್ವಂದ್ವ ಡಿ) ಕ್ರಿಯಾ

II. 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬಿ' ಪಟ್ಟಿಯಲ್ಲಿರುವ ಪದಗಳನ್ನು ಆರಿಸಿ ಹೊಂದಿಸಿ ಬರೆಯಿರಿ. 5x1=5

| 'ಅ' | 'ಬ' |
|---|---|
| 16). ಪಟಪಟ | 1. ಜೋಡುನುಡಿ |
| 17). ಜಂಗಾಲು | 2. ಪಡೆನುಡಿ |
| 18). ಊರೂರು | 3. ರೂಢನಾಮ |
| 19). ಕಷ್ಟಕಾರ್ಪಣ್ಯ | 4. ಪೋರ್ಚುಗೀಸ್ |
| 20). ನದಿ | 5. ಅನುಕರಣಾವ್ಯಯ |
| | 6. ದ್ವಿರುಕ್ತಿ |
| | 7. ತೊಟ್ಟಿಲು |
| | 8. ಮಾತಿಗೊಂದು ಗೀತು |

III. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿಸಿರಿ 5x1=5

21). ಕಿತ್ತೆಸೆಯೊ ಅಂಗುಲಿ ಮಾಲೆಯನು, ಆ __________
22). ರಕ್ಷಣಾ ಪಡೆಗಳು ದೇಶದ ಏಕತೆ ಮತ್ತು __________ ದ ಸಂಕೇತ
23). ಶಿಬಿಯ ತಾಯಿ __________
24). ಮಿತವಿರಲಿ ಮನಸಿನುದ್ವೇಗದಲಿ __________
25). ತೆಂಗಿನಕಾಯಿ ತಿಳಿನೀರ ತಕ್ಕೊಂಡು ______________ ತೊಳೆದೇನ

VI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ 10x1=10

26). ಬುದ್ಧ ತಾನು ಯಾವುದರ ಸಾಧಕನೆಂದು ಅಂಗುಲಿಮಾಲನಿಗೆ ತಿಳಿಸಿದ?
27). ಮೇಷ್ಟ್ರು ಏನೆಂದು ಸಂಕಲ್ಪ ಮಾಡಿದ್ದರು?
28). ವಿಧಾನಸೌಧಕಟ್ಟಡದ ನಿರ್ಮಾಣದಲ್ಲಿ ಹನುಮಂತಯ್ಯನವರ ಉದ್ದೇಶವೇನಾಗಿತ್ತು?
29). ಎಂ. ಶೇಷಾದ್ರಿಯವರು ಎಲ್ಲಿಯ ಜಿಲ್ಲಾಧಿಕಾರಿಗಳಾಗಿದ್ದರು?
30). ಸಿಂಹಕ್ಕೆ ಮಾರಿ ಬಂದಂತಾದುದು ಯಾವಾಗ?
31). ಡಿ.ವಿ.ಜಿ. ಯವರು ಏನನ್ನು ನೋಡಿ ಮನದಲ್ಲಿ ನಗಲು ಹೇಳಿದ್ದಾರೆ?
32). ಮಾನವನು ವಂದ್ಯನಾಗುವುದು ಯಾವಾಗ?
33). ಯಕ್ಷನ ರೂಪದಲ್ಲಿ ಬಂದವರು ಯಾರು?
34). ಜನಪದರ ದೃಷ್ಟಿಯಲ್ಲಿ ಲೋಕದಲ್ಲಿ ಬೆಲೆಯಾದದ್ದು ಯಾವುದು?
35). ಹಿಡಿದ ವ್ರತ ಏಕೆ ಬಿಡಬಾರದು?

V. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ 15x2=30

36). ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?
37). ಆಂಗ್ಲ ಭಾಷೆ ವಿಶ್ವ ವ್ಯಾಪಿಯಾಗಲು ಕಾರಣಗಳೇನು?
38). ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲಿಮಾಲ ತನ್ನಲ್ಲೇ ಹೇಳಿಕೊಂಡದ್ದೇನು?
39). ಅಳು–ನಗು ಪರಸ್ಪರ ವಿರುದ್ಧವಾದುವು ಹೇಗೆ?

40). ಮಂಜಪ್ಪ ಮತ್ತು ಗುಮಾಸ್ತರ ಸಂಭಾಷಣೆಯಲ್ಲಿ ಅಪಾಲಜಿ ಪ್ರಸಂಗವನ್ನು ತಿಳಿಸಿ?
41). ಭವಿಷ್ಯವನ್ನು ಉತ್ತಮವಾಗಿ ಹೇಗೆ ರೂಪಿಸಿಕೊಳ್ಳಬಹುದು?
42). ಯುದ್ಧಕ್ಕೆ ಕಾರಣಗಳು ಯಾವುವು?
43). ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು? ವಿವರಿಸಿ.
44). ಕವಿ ಯಾರು ಯಾರನ್ನು ಭಾರತವೆಂಬ ಬೋಧಿವೃಕ್ಷದ ಕೊಂಬೆಗಳೆಂದು ವರ್ಣಿಸಿದ್ದಾನೆ?
45). ನಿರ್ಮಲಚಿತ್ತವನ್ನು ಗಳಿಸುವುದು ಹೇಗೆ?
46). ಆಕಾಶ, ಗೋವು, ಸತ್ಯ ಇವುಗಳ ಶ್ರೇಷ್ಠತೆಯನ್ನು ಧರ್ಮಜ ಹೇಗೆ ಪ್ರತಿಪಾದಿಸಿದ್ದಾನೆ?
47). ಅಳುವ ಕಂದನ ತುಟಿ,ಹುಬ್ಬು ಮತ್ತು ಕಣ್ಣನೋಟ ಇವುಗಳನ್ನು ತಾಯಿ ಯಾವುದಕ್ಕೆ ಹೋಲಿಸುತ್ತಾಳೆ?
48). ಕವಿ ಬನವಾಸಿ ದೇಶವನ್ನು ನೆನೆಯಲು ಕಾರಣವಾದ ಅಂಶಗಳು ಯಾವುವು?
49). ಭಾರತದ ಪ್ರಾದೇಶಿಕ ವಿಭಿನ್ನತೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?
50). ರಕ್ತ ಮೀರಿದ ಸಂಬಂಧದ ಹಿನ್ನಲೆಯೇನು?

VI. ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿರಿ 5x3=15

51). 'ಹೆಂಡತಿ ಸತ್ತಾಗ ಇಷ್ಟು ಸಂಕಟ ಆಗಲಿಲ್ಲ.'
52). 'ಶಕ್ತನಾದರೆ ನೆಂಟರೆಲ್ಲ ಹಿತರು'.
53) 'ನಮ್ಮೆಲ್ಲರ ವಿಪತ್ತುಗಳೆಲ್ಲವೂ ಈಗ ತೊಲಗಿದವು'.
54). 'ನೆಲನು ಒಂದೆ ಆಕಾಶವು ಒಂದೆ'
55). 'ವೇದ ಕುರಾನ ಬೈಬಲ್ ಸಿಂಧು ನೀ'.

VII ಈ ಕೆಳಗೆ ಕಾಣಿಸಿದವರ ಸ್ಥಳ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. 2x3=6

56). ಅರವಿಂದ ಮಾಲಗತ್ತಿ
57). ಎಂ.ಎಸ್. ಸುಂಕಾಪುರ

VIII. ಕೆಳಗಿನಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರನ್ನುಬರೆಯಿರಿ. 1x3=3

58). ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡ ಮಿಂಪನಾಳ್ದಗೇ

IX. ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿರಿ. 1x3=3

59). ನಿನ್ನ ಕರುಣೆ ಕಡೆಗೋಲಿಟ್ಟು ಮಥಿಸುತಿಹೆ ಏಕೆ?

X. ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ವಿಸ್ತರಿಸಿ ಬರೆಯಿರಿ.

60). 1. ಚಿಂತೆಯೇ ಮುಪ್ಪು; ಸಂತೋಷವೇ ಯೌವ್ವನ. 1x3=3
2. ಸತ್ಯಕ್ಕೆ ಸಾವಿಲ್ಲ.ಸುಳ್ಳಿಗೆ ಸುಖವಿಲ್ಲ.
3. ತುಂಬಿದ ಕೊಡ ತುಳುಕುವುದಿಲ್ಲ.

XI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1x4=4

61). ವಿಪಿನ ಚರ -----------------

--------------------------

--------------------------

------------------- ಬಲ್ಲರ್ (4 ಸಾಲು)

ಅಥವಾ

ಜಲನಿಧಿಗೆ ಸರಿ ಸರಸಿಯಾವುದು
--------------------
--------------------
--------------------
--------------------
ಬಲುಮೆಗವನೀಪಾಲನತಿಪರಿತೋಷದಲಿನುಡಿದ

XII. ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ. 1x4=4

62). ಇಡೆ ತೊಡೆಯನುಡಿದು ನೆಟ್ಟನೆ ।
ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ ॥
ಬಿಡೆನೆಂಬ ತೆರದೆ ಕುಲಗಿರಿ ।
ಕೆಡೆವಂದದೆ ಕೌರವೇಂದ್ರನಾಗಳ್ ಕೆಡೆದಂ ॥

XIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ. 2x4=8

63) 1. ಉತ್ತಮ ಅಭ್ಯಾಸ ಸಾಧನೆಗೆ ಪೂರಕವಾಗುವ ಅಂಶಗಳು ಯಾವುವು?
2. ಗೌರಿ ಸಿದ್ದೇಗೌಡರ ಜೀವ ಉಳಿಸಿದ ಎರಡು ಪ್ರಸಂಗಗಳನ್ನು ವಿವರಿಸಿರಿ.

64) 3. ಮೊಲ ಸಿಂಹವನ್ನು ಕೊಂದ ಬಗೆಯನ್ನು ವಿವರಿಸಿರಿ.

XIV. ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಕುರಿತು 8-10 ವಾಕ್ಯಗಳಲ್ಲಿ ಉತ್ತರಿಸಿರಿ. 1x4=4

65) 1. ಕನಕದಾಸರು ನೀಡಿದ ಜೀವನ ಸಂದೇಶವೇನು?
2. ದುರ್ಯೋಧನನು ವೈಶಂಪಾಯನ ಸರೋವರದಿಂದ ಹೊರಬಂದ ರೀತಿಯನ್ನು ವಿವರಿಸಿ.

XV. ನೀನು ಸರಕಾರಿ ಪ್ರೌಢಶಾಲೆ ಹೆಕ್ಕೂರು ಇಲ್ಲಿಯ ವಿದ್ಯಾರ್ಥಿ 'ಅಕ್ಷಯ' ಎಂದು ತಿಳಿದು ಈ ಕೆಳಗಿನ ಯಾವುದಾದರೂ ಒಂದು ಪತ್ರ ಬರೆ. 1x5=5

66). 1. SSLC ಪರೀಕ್ಷೆಯನ್ನು ಎದುರಿಸುವ ಕುರಿತು ಮಾಡಿದ ಸಿದ್ಧತೆಯ ಬಗ್ಗೆ ನಿಮ್ಮ ತಂದೆಗೆ ಪತ್ರ ಬರೆಯಿರಿ.

ಅಥವಾ

2. ನಿಮ್ಮ ಬಡಾವಣೆಯ ರಸ್ತೆ ದುರಸ್ತಿಗೊಳಿಸುವಂತೆ ಕೋರಿ ಅಧ್ಯಕ್ಷರು ಜಿಲ್ಲಾ ಪಂಚಾಯತ್, ಉಡುಪಿ ಇವರಿಗೆ ಪತ್ರ ಬರೆಯಿರಿ.

XVI. ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 1x5=5

67). 1. ಅತಿವೃಷ್ಠಿಯಿಂದಾಗುವ ಅನಾಹುತಗಳು.
2. ಇಂದಿನ ಶಿಕ್ಷಣ ಪದ್ಧತಿ
3. ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ

*********

# ಮಾದರಿ III
## ಪ್ರಥಮ ಭಾಷೆ ಕನ್ನಡ

**ಸಮಯ : 3 ಗಂಟೆಗಳು** **ಗರಿಷ್ಠ ಅಂಕ: 125**

I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ಕೊಟ್ಟಿದೆ. ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಂಕ ಮತ್ತು ಉತ್ತರವನ್ನು ಉತ್ತರ ಬರೆಯಲು ಬಿಟ್ಟಿರುವ ಜಾಗದಲ್ಲಿಯೇ ಬರೆಯಿರಿ. 15x1=15

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ ______________
ಎ) 25 ಬಿ) 34 ಸಿ) 49 ಡಿ) 50

2. ಪೀಯೂಷ – ಈ ಪದದ ಅರ್ಥ ______________
ಎ) ಅಮೃತ ಬಿ) ಶ್ರೇಷ್ಠ ಸಿ) ತುಪ್ಪ ಡಿ) ಎಣ್ಣೆ

3. ಆಕಾಶ – ಈ ಪದದ ತದ್ಭವ ರೂಪ ________________
ಎ) ಆಕಾಶ ಬಿ) ಆಗಸ ಸಿ) ಅಗಸ ಡಿ) ಗಗನ

4. ಸಿರಿಗನ್ನಡ – ಇದು ಈ ಸಂಧಿಗೆ ಉದಾಹರಣೆ __________
ಎ). ಗುಣ ಬಿ) ಲೋಪ ಸಿ) ಆಗಮ ಡಿ) ಆದೇಶ

5. ಅರಮನೆ – ಇದು ಈ ಸಮಾಸಕ್ಕೆ ಉದಾಹರಣೆ ___________
ಎ) ದ್ವಿಗು ಬಿ) ಕ್ರಿಯಾ ಸಿ) ತತ್ಪುರುಷ ಡಿ) ಅಂಶಿ

6. ದಬದಬನೆ – ಇಲ್ಲಿರುವ ಅವ್ಯಯ ____________
ಎ)ಸಾಮಾನ್ಯಾವ್ಯಯ ಬಿ)ಸಂಬಂಧಾರ್ಥಕಾವ್ಯಯ ಸಿ)ಅನುಕರಣಾವ್ಯಯ ಡಿ) ಭಾವಸೂಚಕಾವ್ಯಯ

7. ಇದು ದ್ವಿರುಕ್ತಿಗೆ ಉದಾಹರಣೆ ______________
ಎ) ಮುಂದೆ ಮುಂದೆ ಬಿ) ದರದರನೆ ಸಿ) ಸರಸರನೆ ಡಿ) ಬಿರಬಿರನೆ

8. ಇಲ್ಲಿರುವ ತದ್ಧತಾಂತ ಭಾವನಾಮ ____________
ಎ) ದೊಡ್ಡತನ ಬಿ) ರಾಮನಂತೆ ಸಿ)ಅಂಜಿಕೆ ಡಿ) ಓಟ

9. ಇಲ್ಲಿರುವ ಗುಂಪಿಗೆ ಸೇರದ ಪದ __________
ಎ) ಮಾಡುತ ಬಿ) ತಿನ್ನುತ್ತ ಸಿ) ಬರಲು ಡಿ) ಉಡಿಗೆ

10. ಶಾಲೆಯಲ್ಲಿ – ಈ ಪದದಲ್ಲಿರುವ ವಿಭಕ್ತಿ ____________
ಎ) ಪ್ರಥಮಾ ಬಿ) ಸಪ್ತಮಿ ಸಿ) ಷಷ್ಠಿ ಡಿ) ದ್ವಿತೀಯಾ

11. ಜುಲ್ಮಾನೆ – ಇದು ಈ ಭಾಷೆಯಿಂದ ಬಂದ ಪದ __________
ಎ) ಉರ್ದು ಬಿ) ಸಂಸ್ಕೃತ ಸಿ) ಹಿಂದಿ ಡಿ) ಇಂಗ್ಲಿಷ್

12. ಆಹಾ ಎಷ್ಟು ಸುಂದರವಾಗಿದೆ – ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ _____
ಎ) ಪ್ರಶ್ನಾರ್ಥಕ ಬಿ) ಭಾವಸೂಚಕ ಸಿ) ಉದ್ಧರಣ ಡಿ) ಅಲ್ಪ ವಿರಾಮ

13. ಇಲ್ಲಿರುವ ನುಡಿಗಟ್ಟು ___________
ಎ) ದಿವಾನ ಬಿ) ಸರದಾರ ಸಿ) ಕಣ್ಣಿಡು ಡಿ) ಸಿನಿಮಾ

14. ಕಂದ ಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ __________
ಎ) 12 ಬಿ) 20 ಸಿ) 64 ಡಿ) 32

15. ಸೀತೆಯ ಮುಖಕಮಲ ಅರಳಿತು – ಇಲ್ಲಿರುವ ಅಲಂಕಾರ ________
ಎ) ಉಪಮಾ ಬಿ) ದೃಷ್ಟಾಂತ ಸಿ) ಶ್ಲೇಷ ಡಿ) ರೂಪಕ

II. 'ಅ' ಪಟ್ಟಿಯಲ್ಲಿರುವ ಪದಗಳನ್ನು 'ಬ' ಪಟ್ಟಿಯ ಪದಗಳೊಂದಿಗೆ ಹೊಂದಿಸಿ ಬರೆಯಿರಿ 5x1=5

| | ಅ | ಬ |
|---|---|---|
| 16. | ಉಪಮಾ | ಮ–ನಗಣ |
| 17. | ಕಿವುಡ | ನಿಷೇಧರೂಪ |
| 18. | ಗುರುಲಘು ಮೂರಿರೆ | ಧಾತು |
| 19. | ಕ್ರಿಯಾಪದದ ಮೂಲರೂಪ | ಅನ್ವರ್ಥ ನಾಮ |
| 20. | ಮಾಡನು | ಹೋಲಿಕೆ |

III. ಖಾಲಿ ಬಿಟ್ಟ ಪದಗಳನ್ನು ಸೂಕ್ತ ಪದಗಳಿಂದ ತುಂಬಿಸಿರಿ. 5x1=5

21. ಶಕ್ತಿಯೇ ಜೀವನ ದುರ್ಬಲತೆಯೇ ____________
22. ಗೌರಿ ಹೆಜ್ಜೆ ಹಾಕಿದ ನೆಲದಲ್ಲಿ ___________ ಬೆಳೆಯಿತು.
23. ನಗು ಅಳುವಿಗೆ ಕಾರಣ ___________
24. ಮರ್ತ್ಯಾವಳಿಗೆ ಮಾತೆ ___________
25. ಮುಕ್ತಾಯಕ್ಕನ ಗುರುವಿನ ಹೆಸರು ____________

IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 10x1=10

26. ನಂದರ ಪ್ರಧಾನ ಮಂತ್ರಿ ಯಾರು?
27. ಮೃಗಗಳು ಬಾರಿಕನನ್ನಾಗಿ ನೇಮಿಸಿದ ನರಿಯ ಹೆಸರೇನು?
28. ಬುದ್ಧ ಯಾರನ್ನು ಅರಸುತ್ತಾ ಬಂದ?
29. ರಕ್ಷಣಾ ಪಡೆಗಳು ಯಾವುದರ ಸಂಕೇತ?
30. ಅಪರಾಧಿಗಳು ಮಾಡಿರುವ ಅಪರಾಧಗಳ ಆರೋಪ ಪಟ್ಟಿಯನ್ನು ಏನೆಂದು ಕರೆಯುವರು?
31. ವ್ಯಾಸ ವಾಲ್ಮೀಕಿ ಭಾರತದ ಯಾವ ಭಾಗದವರು?
32. ಏನನ್ನು ಮೀರಿದ ಸ್ವರ್ಗವೇ ಇಲ್ಲ?
33. ಸತ್ಯವಂತರ ಸಂಗವಿರುವವನಿಗೆ ಯಾವುದು ಬೇಡ?
34. ಲೋಕದಲ್ಲಿ ಬೆಲೆಯಾದದ್ದು ಯಾವುದು?
35. ಶಿವ ಅರ್ಜುನನನ್ನು ಪರೀಕ್ಷಿಸಲು ಯಾವ ವೇಷದಲ್ಲಿ ಬಂದ?

V. ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ. 15x2=30

36. ಕನ್ನಡ ಭಾಷೆ ಹದಗೊಂಡದ್ದು ಹೇಗೆ?
37. ನಕ್ಕಾಗ ಮುಖದಲ್ಲಾಗುವ ಬದಲಾವಣೆ ಏನು?
38. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲಿಮಾಲಾ ತನ್ನಲ್ಲೇ ಹೇಳಿಕೊಂಡದ್ದೇನು?
39. ಸಿದ್ದೇಗೌಡರಿಗೆ ಮಗನ ಬಗೆಗೆ ಕೋಪ ಬಂದ ಸಂದರ್ಭವನ್ನು ವಿವರಿಸಿ?
40. ರಂಗಣ್ಣನ ಮುಖ ಜೋಲು ಬೀಳಲು ಕಾರಣವೇನು?
41. ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪ ಅವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು?

42. ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳು ಯಾವುವು?
43. ಚಂದನದಾಸನಿಗೆ ಒದಗಿದ ವಿಪತ್ತು ಯಾವುದು?
44. ಕವಿ ಯಾರು ಯಾರನ್ನು ಭಾರತವೆಂಬ ಬೋಧಿವೃಕ್ಷದ ಕೊಂಬೆಗಳೆಂದು ವರ್ಣಿಸಿದ್ದಾರೆ?
45. ಪ್ರಜಾಮಾತೆಯ ವೈಶಿಷ್ಟ್ಯವೇನು?
46. ಸತಿ,ಸ್ನೇಹ,ಬಯಕೆಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು?
47. ಹೆಣ್ಣಿಗೆ ತವರಿನ ಬಗೆಗಿರುವ ಅಭಿಮಾನ ಎಂಥದ್ದು?
48. ಬೇಡ ವೇಷಧಾರಿಯಾದ ಶಿವ ಅರ್ಜುನನನ್ನು ಅಪಹಾಸ್ಯ ಮಾಡಿದುದೇಕೆ?
49. ದುರ್ಯೋಧನ ನೀರೊಳಗಿದ್ದೂ ಬೆವರಲು ಕಾರಣವೇನು?
50. ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳಾವುವು?

VI. ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 5x3=15

51. 'ಗಾವಸಿಂಗಮೆಂದುದು ನಿನ್ನಂ'
52. 'ಎರಡು ದೋಣಿಗಳ ಮೇಲೆ ಕಾಲಿಟ್ಟಿದ್ದೆ'
53. 'ಹೆಂಡತಿ ಸತ್ತಾಗ ಇಷ್ಟು ಸಂಕಟ ಆಗಲಿಲ್ಲ'
54. 'ಬೇವಿನ ಫಲಂ ಸ್ವಾದಪ್ಪುದೇ'
55. 'ನಡೆವೆಣನೇ ದರಿದ್ರನು'

VII. ಈ ಕೆಳಗಿನ ಕವಿಗಳ ಸ್ಥಳ–ಕಾಲ–ಕೃತಿಗಳನ್ನು ಕುರಿತು ಬರೆಯಿರಿ 2*3=6

56. ಎಂ. ಮರಿಯಪ್ಪ ಭಟ್ಟರು
57. ಪಂಪ

VIII. ಕೆಳಗಿನ ಪದ್ಯಬಾಗಕ್ಕೆ ಪ್ರಸ್ತಾರಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3

58. ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್

IX. ಕೆಳಗಿನ ವಾಕ್ಯದ ಅಲಂಕಾರ ಹೆಸರಿಸಿ ಸಮನ್ವಯಿಸಿ. 1x3=3

59. ಕಾಲಾಗ್ನಿರುದ್ರಂ ಪೊರಮಡುವವೊಲಂತಾ ಸರೋವರ ಮಧ್ಯದಿಂ ಪೊರಮಟ್ಟು

X. ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ 1x3=3

60. ಅತಿಯಾಸೆ ಗತಿಕೇಡು
ಮಾತೇ ಮುತ್ತು; ಮಾತೇ ಮೃತ್ಯು.
ಕಟ್ಟುವುದು ಕಠಿಣ; ಕೆಡಿಸುವುದು ಸುಲಭ

XI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.(ನಾಲ್ಕು ಸಾಲುಗಳು) 1x4=4

61. ಜನ್ಮಭೂಮಿಯ ––––––––––––––––––
––––––––––––––––––––––––––––
––––––––––––––––––––––––––––
––––––––––––– ಸಂಬಂಧವೇ ಎಲ್ಲ

ಅಥವಾ

ವಿಪಿನ ಚರ ----------------
------------------------
------------------------
--------- ನುಡಿಯನೊಲ್ವರೆ ಬಲ್ಲರ್

XII. ಕೆಳಗಿನ ಪದ್ಯಭಾಗದ ಸಾರಾಂಸವನ್ನ ನಿಮ್ಮ ಮಾತುಗಳಲ್ಲಿ ಬರೆಯಿರಿ 1x4=4

62. ನುಡಿಯಲು ಬಾರದು ಕೆಟ್ಟ ನುಡಿಗಳ
ನಡೆಯಲು ಬಾರದು ಕೆಟ್ಟ ನಡೆಗಳ
ನುಡಿದಡೇನು ನುಡಿಯದಿರ್ದಡೇನು?
ಹಿಡಿದ ವ್ರತ ಬಿಡದಿರಲು, ಅದೇ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ

XIII. ಯಾವುದಾದರೂ 2 ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2x4=8

63. ಗೌರಿ ತ್ಯಾಗಮಯಿ ಎಂಬುವುದನ್ನು ಸಂಕ್ಷಿಪ್ತವಾಗಿ ವಿವರಿಸಿ?.
64. ಎಂ.ಎಸ್. ಸುಂಕಾಪುರ ಅವರು ಹೇಳುವಂತೆ ನಗು–ಅಳುವನ್ನು ಸಮನ್ವಯ ದೃಷ್ಠಿಯಿಂದ ಸ್ವೀಕರಿಸುವುದು ಹೇಗೆ?
ಮೊಲ ಸಿಂಹವನ್ನು ಕೊಂದ ಬಗೆಯನ್ನು ವಿವರಿಸಿ.

XIV. ಯಾವುದಾದರೂ 1 ಪ್ರಶ್ನೆಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1x4=4

65. ಭರತ ಭೂಮಿಯ ವರಪುತ್ರನಾಗಬಯಸುವವನು ಹೇಗೆ ಬೆಳೆದು ಬಾಳಬೇಕು?
ಪಂಪ ಬನವಾಸಿ ದೇಶವನ್ನು ಹೇಗೆ ವರ್ಣಿಸಿದ್ದಾನೆ.?

XV. 66. ನೀವು ಸರಕಾರಿ ಪ್ರೌಢಶಾಲೆ ಒಳಕಾಡು ಉಡುಪಿ ಇಲ್ಲಿಯ ದೀಪಕ್/ದೀಪಿಕಾ ಎಂದು ಭಾವಿಸಿ ಬದಲಾಗುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿಯನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿ ತಂದೆಗೆ ಪತ್ರ ಬರೆಯಿರಿ. 1*5=5

ಅಥವಾ

ನಿಮ್ಮ ಪ್ರದೇಶದ ಅತಿವೃಷ್ಠಿಯನ್ನು ವಿವರಿಸಿ, ನೆರೆ ಪರಿಹಾರ ಕೈಗೊಳ್ಳಲು ವಿನಂತಿಸಿ ಉಡುಪಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.

XVI. ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು 10–15 ವಾಕ್ಯಗಳಲ್ಲಿ ಒಂದು ಪ್ರಬಂಧವನ್ನು ಬರೆಯಿರಿ. 1*5=5

67. ಹೆಚ್1 ಎನ್1 ಖಾಯಿಲೆಗೆ ಸಂಬಂಧಿಸಿದಂತೆ ಸರಕಾರ ವಹಿಸಬೇಕಾದ ಪಾತ್ರ.
ಪರಿಸರ ಮಾಲಿನ್ಯವನ್ನು ತಡೆಗಟ್ಟುವಲ್ಲಿ ವಿದ್ಯಾರ್ಥಿಗಳ ಪಾತ್ರ
ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ.

*************